ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂಖ್ಯೆ:ಕರಾಸಾ/ಕೇಕ/ಆಡಳತ/ಸೇನಿ/ / 88 /2020-21 ದಿನಾಂಕ: 18/19-03-2021

## ಸುತ್ತೋಲೆ ಸಂಖ್ಯೆ: 1688

ವಿಷಯ: ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ಹುದ್ದೆಗಳಗೆ ನಿಗದಿಪಡಿಸಿರುವ ತರಬೇತಿ ಅವಧಿಯನ್ನು 2 ವರ್ಷದಿಂದ 1 ವರ್ಷಕ್ಕೆ ಇಳಸುವ ಬಗ್ಗೆ.

ಉಲ್ಲೇಖ: 1. ಟಿಡಿ 07 ಟಿಸಿಎಸ್ 2021 ದಿನಾಂಕ:16-03-2021
2. ಸುತ್ತೋಲೆ ಸಂಖ್ಯೆ: 1317, ದಿನಾಂಕ:09.09.2004
3. ಸುತ್ತೋಲೆ ಸಂಖ್ಯೆ: 1422, ದಿನಾಂಕ:08.07.2010

- - - - -

ಕರಾರಸಾ ನಿಗಮ (ಪದವೃಂದ ಮತ್ತು ನೇಮಕಾತಿ) ನಿಯಮಾವಳ 1982ರ ನಿಯಮಾವಳ 12 (1) ರಡಿ ಇರುವ ಅವಕಾಶದಂತೆ ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4 ಹುದ್ದೆಗಳಗೆ ಆಯ್ಕೆಗೊಂಡ ಅಭ್ಯರ್ಥಿಗಳಗೆ 2 ವರ್ಷಗಳ ತರಬೇತಿ ಅವಧಿಯನ್ನು ಸುತ್ತೋಲೆ ಸಂಖ್ಯೆ: 1317, ದಿನಾಂಕ:09.09.2004ರಲ್ಲಿ ನಿಗದಿಪಡಿಸಲಾಗಿದೆ.

ಪ್ರಸ್ತುತ, ಸರ್ಕಾರವು ಉಲ್ಲೇಖ-1 ರಡಿ ಸಾರಿಗೆ ಸಂಸ್ಥೆಗಳಲ್ಲಿ ತರಬೇತಿಯಲ್ಲಿರುವ ನೌಕರರ ತರಬೇತಿ ಅವಧಿಯನ್ನು ಜುಲೈ-2021 ರಿಂದ ಜಾರಿಗೆ ಬರುವಂತೆ ಎರಡು ವರ್ಷದಿಂದ ಒಂದು ವರ್ಷಕ್ಕೆ ಇಳಸಲು ಅನುಮೋದನೆ ನೀಡಿರುತ್ತದೆ. ಅದರಂತೆ, ಸುತ್ತೋಲೆ ಸಂಖ್ಯೆ: 1317, ದಿನಾಂಕ:09.09.2004ರಲ್ಲಿ ನಿಗದಿಪಡಿಸಿರುವ ತರಬೇತಿ ಅವಧಿಯನ್ನು ಮಾರ್ಪಡಿಸಿ ದರ್ಜೆ-3 ಮೇಲ್ವಿಚಾರಕೇತರ ಹಾಗೂ ದರ್ಜೆ-4ರ ಹುದ್ದೆಗಳ ತರಬೇತಿ ಅವಧಿಯನ್ನು 01-ಜುಲೈ-2021 ರಿಂದ ಜಾರಿಗೆ ಬರುವಂತೆ 1 (ಒಂದು) ವರ್ಷಕ್ಕೆ ನಿಗದಿಪಡಿಸಲಾಗಿದೆ.

ಪ್ರಸ್ತುತ, ತರಬೇತಿಯಲ್ಲಿರುವ ಅಭ್ಯರ್ಥಿಗಳನ್ನು ಈ ಕೆಳಕಂಡಂತೆ ಪರೀಕ್ಷಾರ್ಥ ಸೇವೆ ಮೇಲೆ ನಿಯೋಜಿಸುವುದು.

1. 2 ವರ್ಷದ ತರಬೇತಿ ಮೇಲೆ ನೇಮಕಗೊಂಡ ಅಭ್ಯರ್ಥಿಗಳು ದಿನಾಂಕ:01-ಜುಲೈ-2021 ರಂದು ಇದ್ದಂತೆ ಒಂದು ವರ್ಷ ತರಬೇತಿ ಅವಧಿಯನ್ನು ಪೂರ್ಣಗೊಳಸಿದ್ದಲ್ಲಿ, ದಿನಾಂಕ: 01-ಜುಲೈ-2021 ರಿಂದ ಜಾರಿಗೆ ಬರುವಂತೆ ನಿಯಮಾನುಸಾರ ಪರೀಕ್ಷಾರ್ಥ ಸೇವೆ ಮೇಲೆ ನಿಯೋಜಿಸುವುದು.
2. ದಿನಾಂಕ:01-ಜುಲೈ-2021 ರಂದು ಇದ್ದಂತೆ ಒಂದು ವರ್ಷ ತರಬೇತಿ ಅವಧಿ ಪೂರ್ಣಗೊಳ್ಳದೆ ಇರುವ ತರಬೇತಿ ಅಭ್ಯರ್ಥಿಗಳನ್ನು ಒಂದು ವರ್ಷ ಪೂರ್ಣಗೊಂಡ ನಂತರ ನಿಯಮಾನುಸಾರ ಪರೀಕ್ಷಾರ್ಥ ಸೇವೆ ಮೇಲೆ ನಿಯೋಜಿಸುವುದು.

ಉಳದಂತೆ ಉಲ್ಲೇಖಿತ ಸುತ್ತೋಲೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಸಂಬಂಧಪಟ್ಟವರೆಲ್ಲರೂ ಮೇಲಿನ ಆದೇಶವನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

(ಶಿವಯೋಗಿ ಸಿ. ಕಳಸದ, ಭಾ.ಆ.ಸೇ.,)
ವ್ಯವಸ್ಥಾಪಕ ನಿರ್ದೇಶಕರು

# ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಃ ಕೇಂದ್ರ ಕಛೇರಿ ಃಹುಬ್ಬಳ್ಳಿ

(ಆಡಳಿತ / ಸಿಬ್ಬಂದಿ ಇಲಾಖೆ)

ಸಂಖ್ಯೆ: ವಾಕರಸಾ/ಕೇಕ/ಹು/ಸಿಬ್ಬಂದಿ/ಎ-11/ 652 /2021 ದಿನಾಂಕ: 27-04-2021

<u>ಪ್ರತಿಯನ್ನು ಆದರ ಪೂರ್ವಕವಾಗಿ:</u>

- ಎಲ್ಲಾ ಇಲಾಖಾ ಮುಖ್ಯಸ್ಥರು, ವಾ ಕ ರ ಸಾ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ಕಾರ್ಯ ವ್ಯವಸ್ಥಾಪಕರು / ಪ್ರಾಂಶುಪಾಲರು / ಕಾರ್ಯನಿರ್ವಾಹಕ ಅಭಿಯಂತರರು, ವಾ ಕ ರ ಸಾ ಸಂಸ್ಥೆರವರ ಮಾಹಿತಿಗಾಗಿ ಹಾಗೂ ಸದರಿ ಸುತ್ತೋಲೆಯನ್ನು ಈ ಸಂಸ್ಥೆಯಲ್ಲಿಯೂ ಸಹ ಯಥಾವತ್ತಾಗಿ ಅಳವಡಿಸಿಕೊಳ್ಳಲು ಸೂಕ್ತಾಧಿಕಾರಿಗಳು ಅನುಮೋದಿಸಿರುತ್ತಾರೆ.
- ಮುಖ್ಯ ಗಣಕ ವ್ಯವಸ್ಥಾಪಕರು, ವಾ ಕ ರ ಸಾ ಸಂಸ್ಥೆ, ಕೇಂದ್ರ ಕಛೇರಿ, ಹುಬ್ಬಳ್ಳಿ ರವರ ಮಾಹಿತಿಗಾಗಿ ಹಾಗೂ ಸುತ್ತೋಲೆಯನ್ನು ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.

<u>ಪ್ರತಿಯನ್ನು:</u> ಮಾನ್ಯ ಅಧ್ಯಕ್ಷರ / ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ರವರ ಆಪ್ತ ಕಾರ್ಯದರ್ಶಿರವರ ಮಾಹಿತಿಗಾಗಿ ಕಳುಹಿಸಿದೆ.

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು